ಪರೀಕ್ಷೆಗಳು ಜಗತ್ತಿನಾದ್ಯಂತ ಇರುವ ಒಂದು ಪ್ರಕ್ರಿಯೆ. ಪರೀಕ್ಷೆಯ ಒಂದೇ ಒಂದು ಉದ್ದೇಶವೆಂದರೆ ವಿದ್ಯಾರ್ಥಿಯ ಸಾಮರ್ಥ್ಯವನ್ನು ಕಂಡುಹಿಡಿಯುವುದು. ಪರೀಕ್ಷೆ ಯಾವುದೇ ಆಗಿರಲಿ, ಮೌಖಿಕ – ಲಿಖಿತ **(Oral/viva/written)** ಪರೀಕ್ಷಕನ ಉದ್ದೇಶ ವಿದ್ಯಾರ್ಥಿಗೆ ವಿಷಯಗಳು ಎಷ್ಟು ಗೊತ್ತಿದೆ ಎಂಬುದನ್ನು ಪತ್ತೆ ಹಚ್ಚುವುದು. ಅಂದರೆ ಹೆಚ್ಚಿನ ಶಿಕ್ಷಕರು ಹೇಳುವ ಹಾಗೆ ಪರೀಕ್ಷಕ ಪ್ರಶ್ನೆಪತ್ರಿಕೆಗಳನ್ನು ರೂಪಿಸುವಾಗ 'ವಿದ್ಯಾರ್ಥಿ ಫೇಲಾಗಲಿ' ಎಂಬ ಉದ್ದೇಶದಿಂದ ಪ್ರಶ್ನೆಗಳನ್ನು ಹಾಕುವುದಿಲ್ಲ. ಉದ್ದೇಶ ಹೀಗಿದ್ದ ಮೇಲೆ ಪರೀಕ್ಷೆಗಳ ಬೇರೆ ಬೇರೆ ವಿಧಾನಗಳಿಂದ ವಿದ್ಯಾರ್ಥಿಯ ಸಾಮರ್ಥ್ಯ ಕಂಡುಹಿಡಿಯಲು ಸಾಧ್ಯ. ಹಾಗಾಗಿಯೇ ಜಗತ್ತಿನ ಎಲ್ಲೆಡೆ ಪರೀಕ್ಷೆಗಳು ನಡೆದರೂ, ಅವುಗಳನ್ನು ನಡೆಸುವ ರೀತಿ ಬೇರೆ ಬೇರೆ.

ಪರೀಕ್ಷೆಗಳಲ್ಲಿ ಮುಖ್ಯವಾಗಿ ಎರಡು ವಿಧಗಳಿವೆ. ಒಂದು ಅರ್ಹತಾ ಪರೀಕ್ಷೆಗಳು **(Qualifying exams)**. ಅಂದರೆ ಪರೀಕ್ಷೆಗಳಿಗೆ ಇಂತಿಷ್ಟು ಮಾರ್ಕ್ಸ್ ಸಾಕು, ನೀವು ಆ ಪರೀಕ್ಷೆ 'ಪಾಸಾ'ಗುತ್ತೀರಿ. ಮುಂದಿನ ತರಗತಿಗೆ ಸಾಗುತ್ತೀರಿ. ನಮ್ಮ 12ನೇ ತರಗತಿಯವರೆಗಿನ ಪರೀಕ್ಷೆಗಳು ಈ ಬಗೆಯವು.

ಅದೇ ಇನ್ನೊಂದು ರೀತಿಯ ಪರೀಕ್ಷೆ 'ಸ್ಪರ್ಧಾತ್ಮಕ'ವಾದದ್ದು. **(Competitive exams)**. ಅಂದರೆ ಈ ಪರೀಕ್ಷೆಯಲ್ಲಿ ಇತರರು ಹೇಗೆ ಮಾಡುತ್ತಾರೆ, ನೀವು ಇತರರಿಗಿಂತ ಎಷ್ಟು ಉತ್ತಮವಾಗಿ ಮಾಡುತ್ತೀರಿ ಎಂಬುದರ ಮೇಲೆಯೂ ನಿಮ್ಮ ರ್‍ಯಾಂಕ್ ನಿರ್ಧಾರವಾಗುತ್ತದೆ. ಎಲ್ಲಿ ಸಂಪನ್ಮೂಲಗಳು – ಅವಕಾಶಗಳು ಸೀಮಿತವಾಗಿರುತ್ತವೆಯೋ, ಅಂದರೆ ಇಂತಿಷ್ಟು ಸೀಟುಗಳು ಮಾತ್ರ ಲಭ್ಯವೋ ಅಂಥ ಕ್ಷೇತ್ರಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳು ಅವಶ್ಯಕ ಎನಿಸುತ್ತವೆ.

ಅರ್ಹತಾ ಪರೀಕ್ಷೆಗಳಾಗಲೀ, ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಲೀ, ಬೇಕಾದಷ್ಟು ಕೋರ್ಸುಗಳು, ಸಲಹಾ ಅಂತರ್ಜಾಲ ತಾಣಗಳು, ನಿಮ್ಮ ಸಾಮರ್ಥ್ಯ ಕಡಿಮೆಯಿದ್ದರೂ ಯಾವ ವಿಧಾನಗಳಿಂದ ನೀವು ಹೆಚ್ಚು ಅಂಕ ಗಳಿಸಬಹುದು— ಎಂಬ ಬಗ್ಗೆ ಮಾಹಿತಿ ಎಲ್ಲವೂ ಈಗ ಸುಲಭವಾಗಿ ದೊರೆಯುತ್ತದೆ. ಅಂತಹ ತಾಣಗಳಿಗೆ, ಕೋರ್ಸುಗಳಿಗೆ ತಂದೆ–ತಾಯಿ, ಮನಸ್ಸಿಲ್ಲದಿದ್ದರೂ ಮಕ್ಕಳು ಮುಗಿಬೀಳುತ್ತಾರೆ. ಪರೀಕ್ಷೆಯ ಈ **'rat race'** ನಲ್ಲಿ ಸುತ್ತಮುತ್ತ ನೋಡಲು, ಪರೀಕ್ಷೆಯ ಇತರ ಆಯಾಮಗಳನ್ನು ನೋಡಲು ನಮಗೆ ಪುರುಸೊತ್ತೇ ಆಗುವುದಿಲ್ಲ. ಇನ್ನೇನು ಸ್ವಲ್ಪ ಸಮಯ ಸಿಕ್ಕಿತು ಎನ್ನುವಷ್ಟರಲ್ಲಿ ಪರೀಕ್ಷೆ ಮುಗಿದಿರುತ್ತದೆ!

ನಮಗೆ ಪರೀಕ್ಷೆಯ ಬಗ್ಗೆ ಅದೂ ಪರೀಕ್ಷೆ ಇಲ್ಲದಿರುವಾಗ ಅಥವಾ ಇನ್ನೂ 'ಒಂದು' ವರ್ಷದಷ್ಟು ದೂರವಿರುವಾಗ ಅದರ ಬಗ್ಗೆ ಯೋಚಿಸಲು ಮನಸ್ಸು ಕೇಳುವುದಿಲ್ಲ. ಹಾಗಾಗಿಯೇ ಇತರ ದೇಶಗಳಲ್ಲಿರುವ ವಿದ್ಯಾಭ್ಯಾಸ ಕ್ರಮ, ಪರೀಕ್ಷಾ ಕ್ರಮ, ಅವುಗಳ ಯಶಸ್ಸು– ಇವುಗಳ ಬಗ್ಗೆ ನಮ್ಮ ವಿದ್ಯಾರ್ಥಿಗಳು/ –ಪೋಷಕರಿಗೆ ಗೊತ್ತಿರುವುದಿಲ್ಲ. 'ಕೆಲವೊಮ್ಮೆ ತಿಳಿದು ಮಾಡುವುದೇನು' ಎಂಬ ನಿರಾಸಕ್ತಿಯೂ ಕಾಡುತ್ತದೆ.

ಪರೀಕ್ಷೆಯ ಬಗೆಗಿನ ಪರಿಕಲ್ಪನೆಗಳು ಪ್ರತಿ ಸಮಾಜದ 'ಜೀವನ'ದ ಪರಿಕಲ್ಪನೆಗಳ ಮೇಲೆಯೂ ಅವಲಂಬಿಸಿರುತ್ತವೆ. ಉದಾಹರಣೆಗೆ ನಮ್ಮಲ್ಲಿ ಪ್ರಚಲಿತವಿರುವ ಓದುವ ಪ್ರಕ್ರಿಯೆ ನೇರವಾಗಿ ಉದ್ಯೋಗದ ಗುರಿ ಹೊಂದಿರುವಂಥದ್ದು. 6ನೇ ತರಗತಿಯಲ್ಲಿಯೇ ಐಐಟಿ ತಯಾರಿಗಾಗಿ ಟ್ಯೂಷನ್ ತೆಗೆದುಕೊಳ್ಳುವುದು ಇದಕ್ಕೆ ಉತ್ತಮ ಉದಾಹರಣೆ. ಅಥವಾ ಭಾರತದಲ್ಲಿ ವೈದ್ಯಕೀಯ ವಿದ್ಯಾರ್ಥಿಗಳು ಥಿಯರಿಯ ವಿಷಯ ತಿಳಿದಿರುವುದು, ಗಂಟೆಗಟ್ಟಲೆ ಓದುವುದು, 2—3 ವರ್ಷಕ್ಕೆಲ್ಲಾ ಓದಿ ಹೊರಬೀಳುವುದು ಸಾಮಾನ್ಯ ಸಂಗತಿ.

ಅದೇ ಅಮೆರಿಕಾದಲ್ಲಿ ಇದು ಸಾಮಾನ್ಯವಲ್ಲ! ಈಗಷ್ಟೇ ಹೊರಬಂದ ವೈದ್ಯರು ಭಾರತದಲ್ಲಿ ಪ್ರಾಣವುಳಿಸುವ ಪ್ರಾಯೋಗಿಕ **Cardiopulmonary resuscitation (CPR)** ನಲ್ಲಿ ಆತ್ಮವಿಶ್ವಾಸದಿಂದ ಪರಿಣತಿ ಹೊಂದಿರಲಾರರು, ಅದೇ ಬ್ರಿಟನ್— ಅಮೆರಿಕಾದಲ್ಲಿ ಮುಂದಿನ 'ಎಂಟ್ರೆನ್ಸ್' ಪರೀಕ್ಷೆಗೆ ಕುಳಿತು ಓದುವಷ್ಟು, ತಕ್ಷಣ ಎಂ.ಡಿ. ಪಡೆದು 2—7 ವರ್ಷಕ್ಕೆಲ್ಲಾ 'ಸ್ಪೆಷಲಿಸ್ಟ್' ವೈದ್ಯರಾಗದಿದ್ದರೂ, ಪ್ರಾಯೋಗಿಕವಾಗಿ ಅವರು ಮೂಲಭೂತ **CPR** ನಲ್ಲಿ ಪರಿಣತಿ ಹೊಂದಿಲ್ಲದಿದ್ದರೆ ಅವರನ್ನು 'ವೈದ್ಯ'ರು ಎಂದು ವೈದ್ಯಕೀಯ ಬೋರ್ಡ್ ಒಪ್ಪುವುದಿಲ್ಲ.

ಇನ್ನು ಶಿಕ್ಷಣ ವ್ಯವಸ್ಥೆಯಲ್ಲಿ ಬಹುವಾಗಿ ಚರ್ಚಿತವಾಗಿರುವ ಫಿನ್ಲೆಂಡ್‌ನಲ್ಲಿ ಪರೀಕ್ಷೆಗಳ ಬಗೆಗಿರುವ ಕ್ರಮವನ್ನು ನೋಡೋಣ.

